18ನೇ ಶತಮಾನದ ತರುವಾಯ ಯುರೋಪಿನಲ್ಲಿ ವೈಚಾರಿಕವಾಗಿ ಹೊಸ ಬದಲಾವಣೆ ಸಂಭವಿಸುತ್ತದೆ. ಅದನ್ನು ಜ್ಞಾನೋದಯ ಅಥವಾ ಪುನರುತ್ಥಾನವೆಂದು ಕರೆಯುತ್ತಾರೆ. ಇದರಿಂದಾಗಿ ಪಶ್ಚಿಮದಲ್ಲಿ ವಿಜ್ಞಾನ ಮತ್ತು ಸಾಹಿತ್ಯದ ಸಂಬಂಧ ಬದಲಾಗುತ್ತದೆ. ಇಂಥಲ್ಲಿ ವಿಜ್ಞಾನವನ್ನು ಶ್ರೇಷ್ಠ ಜ್ಞಾನವೆಂದು ಕರೆಯಲಾಯಿತು. ನಂತರದ ಸ್ಥಾನ ಸಮಾಜ ವಿಜ್ಞಾನಗಳಿಗೆ ಸಂದಿತು. ಎಲ್ಲಾಕ್ಕಿಂತ ಕೊನೆಯ ಸ್ಥಾನವನ್ನು ಸಾಹಿತ್ಯ ಮತ್ತು ಕಲೆಗಳಿಗೆ ಕೊಡಲಾಯಿತು. ಕಾರಣ ಇವು ನಿಖರವಾಗಿ ಸತ್ಯವನ್ನು ಮಂಡಿಸುವುದಿಲ್ಲವೆಂಬ ವಾದ ಬೆಳೆದುಬಂತು. ಸಾಹಿತ್ಯವನ್ನು ನಾನ್ ನಾಲೇಜ್ ಎಂದೇ ಗುರುತಿಸಲಾಯಿತು. ಇದು ಮನುಷ್ಯರ ಸಂವೇದನೆ ಮತ್ತು ಅನುಭೂತಿಗಳಿಗೆ ಸಂಬಂಧಿಸಿದ್ದೆಂದು ಸಾರಲಾಯಿತು. ಇದು ಇಪ್ಪತ್ತನೇ ಶತಮಾನದುದ್ದಕ್ಕೂ ಬೆಳೆದುಬಂತು. ಆದರೆ ಇಪ್ಪತ್ತನೇ ಶತಮಾನದಲ್ಲಿ ಈ ಅಭಿಪ್ರಾಯ ಕೊಂಚ ಹಿಂದೆ ಸರಿಯುತ್ತಿದೆ. ಸಾಹಿತ್ಯದ ಜ್ಞಾನಕ್ಕೂ ವಿಶೇಷ ಮನ್ನಣೆ ದೊರೆಯುತ್ತಿದೆ. ಕೆಲವೊಮ್ಮೆ ಸಮಾಜವಿಜ್ಞಾನ ಮತ್ತು ಸಾಹಿತ್ಯದ ಜ್ಞಾನವನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುವ ತಪ್ಪು ಕೆಲಸವನ್ನೂ ಕೆಲ ವಿಮರ್ಶಕರು ಮಾಡಿದರು. ಎಷ್ಟೋ ಸಲ ಸಾಮಾಜಿಕ, ರಾಜಕೀಯ ಜ್ಞಾನದ ಪರಿಧಿಯಲ್ಲಿ ಸಾಹಿತ್ಯದ ತಿಳಿವಳಿಕೆಯನ್ನು ಕೂಡಿಸುವ ಅತಿರೇಕದ ನಿಲುವು ತಳೆಯಲಾಯಿತು. ಸಾಹಿತ್ಯ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ನಿಮಿತ್ತವಾಗಿ ಬಳಸಲಾಯಿತು. ಇವುಗಳಿಗೆ ಅನುಗುಣವಾಗಿ ಬಂದರೆ ಮಾತ್ರ ಸಾಹಿತ್ಯದ ಸಾರ್ಥಕತೆ ಎನ್ನಲಾಯಿತು. ಸಾಹಿತ್ಯದ ಪ್ರಸ್ತುತತೆಯನ್ನು ದುರ್ಬಲ ಅಂಶಗಳ ಆಧಾರದ ಮೇಲೆ ಅರ್ಥೈಸಲಾಯಿತು. ನಮ್ಮ ಬಹುತೇಕ ಸಂಶೋಧನಾ ಪ್ರಬಂಧಗಳು ಇದೇ ನೆಲೆಯಲ್ಲಿರುತ್ತವೆ. ವಿಮರ್ಶಕರನ್ನು ಒತ್ತಾಯಪೂರ್ವಕವಾಗಿ ಸಮಾಜಶಾಸ್ತ್ರದ ಮತ್ತು ರಾಜ್ಯಶಾಸ್ತ್ರದ ಪರಿಧಿಯಲ್ಲಿ ಕೂಡಿಸಲಾಗುತ್ತಿದೆ. ಪ್ರಜಾಪ್ರಭುತ್ವದಲ್ಲಿ ಸಂವಾದ ಮುಖ್ಯವಾದದ್ದು. ಅದನ್ನು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಸಾಹಿತ್ಯ ಕುರಿತ ವಿಪರೀತದ ನಿಲುವುಗಳು ಸಾಹಿತ್ಯದ ಸ್ವಾತಂತ್ರ್ಯವನ್ನು ಅಪಾಯಕ್ಕೆ ತಳ್ಳುತ್ತಿವೆ. ಇಂಥ ಒತ್ತಾಯಗಳನ್ನು ಸಾಹಿತ್ಯದ ವಲಯದವರು ನಿರಾಕರಿಸಬೇಕಾಗಿದೆ. ಸತ್ಯ ಯಾವುದೇ ಶಾಸ್ತ್ರಗಳ ಗುತ್ತಿಗೆಯಲ್ಲ. ಸಮಾಜಶಾಸ್ತ್ರ



ಮತ್ತು ರಾಜ್ಯಶಾಸ್ತ್ರದೊಂದಿಗೆ ನಾವು ಸಂವಾದ ಮಾಡೋಣ. ಆದರೆ ಅವುಗಳ ಇಶಾರೆಯಲ್ಲಿ ಸಾಹಿತ್ಯದ ಚರ್ಚೆಯನ್ನು ನಡೆಸುವ ಅಗತ್ಯವಿಲ್ಲ. ಸತ್ಯವನ್ನು ಹೇಳುವ ಹಕ್ಕು ಮೇಲಿನ ಶಾಸ್ತ್ರಗಳಿಗೆ ಹೇಗಿದೆಯೋ ಹಾಗೆಯೇ ಸಾಹಿತ್ಯಕ್ಕೂ ಇದೆ. ಸಾಹಿತ್ಯ ಯಾವುದೇ ಶಾಸ್ತ್ರಗಳ ಸಾಧನವಾಗಬೇಕಿಲ್ಲ (ಇನ್‌ಸ್ಟ್ರುಮೆಂಟ್). ಅವುಗಳ ವಿಚಾರಗಳನ್ನು ಮರುಮಂಡಿಸಬೇಕಿಲ್ಲ.

ನಮ್ಮ ಸ್ವಾತಂತ್ರ್ಯಹೋರಾಟದ ಸಮಯದಲ್ಲೂ ಈ ತಪ್ಪು ನುಸುಳಿತು. ಸಾಹಿತ್ಯವನ್ನು ಸ್ವಾತಂತ್ರ್ಯ ಚಳವಳಿಯ ಸಾಧನವಾಗಿಸಿಕೊಳ್ಳಲು ಪ್ರಯತ್ನಿಸಲಾಯಿತು. ಒಂದು ಹಂತದವರೆಗೆ ಇದು ಉಪಯುಕ್ತವಾಗಿರಬಹುದು. ಆದರೆ ಬರುಬರುತ್ತಾ ಸಾಹಿತ್ಯದ ಕೆಲಸ ಇದಲ್ಲ ಎಂಬುದು ಎಲ್ಲರಿಗೂ ತಿಳಿಯಿತು. ಚಳವಳಿಯ ಸಾಧನವಾಗಿ ಸಾಹಿತ್ಯವನ್ನು ಬಳಸಿಕೊಳ್ಳಲಾಯಿತು. ಸಾಹಿತ್ಯದ ಹೆಸರಿನಲ್ಲಿ ಸಮಾಜವಿಜ್ಞಾನವನ್ನು ಕಲಿಸತೊಡಗಿದರು. ಆ ಸಮಾಜವಿಜ್ಞಾನ ಕೂಡ ಅಪ್‌ಡೇಟೆಡ್ ಆದದ್ದಲ್ಲ. ನಲವತ್ತು ಐವತ್ತು ವರ್ಷಗಳ ಹಿಂದಿನದು. ಒಂದು ವೇಳೆ ಸಮಾಜವಿಜ್ಞಾನವನ್ನು ಸಾಹಿತ್ಯದ ನೆಪದಲ್ಲಿ ಕಲಿಸತೊಡಗಿದರೆ ಸಾಹಿತ್ಯವನ್ನು ಓದುವ ಅಗತ್ಯವಾದರೂ ಏನು? ಕೆಲವೊಮ್ಮೆ ಇಂಥ